# ರೈತನ ಜಾಣ್ಮೆ

ರೈತನೊಬ್ಬ ಹೊಲದಲ್ಲಿ ಉಳುತ್ತಿದ್ದ. ಅದೇ ದಾರಿಯಲ್ಲಿ ರಾಜನು ಕುದುರೆಯ ಮೇಲೆ ಹೊರಟಿದ್ದ. ಹೊಲದಲ್ಲಿ ಉಳುತ್ತಿದ್ದ ರೈತನನ್ನು ಕಂಡು ಏನಯ್ಯಾ, ನೀನು ಒಂದು ದಿನಕ್ಕೆ ಎಷ್ಟು ಸಂಪಾದನೆ ಮಾಡುವೆ? ಎಂದು ರಾಜ ಕೇಳಿದ.

ರೈತ ದಿವಸಕ್ಕೆ ನಾಲ್ಕಾಣೆ ಮಾತ್ರ ಸಂಪಾದಿಸುವೆನು ಎಂದ. ಮತ್ತೆ ರಾಜನು ಅಷ್ಟರಿಂದ ಏನು ಮಾಡುವೆ? ಎಂದು ಕೇಳಿದ. ಒಂದಾಣೆಯಿಂದ ಉಣ್ಣುವೆನು. ಇನ್ನೊಂದಾಣೆ ಸಾಲವಾಗಿ ಕೊಡುವೆನು. ಮೂರನೆಯದನ್ನು ಸಾಲಕ್ಕೆ ಕೊಡುವೆನು ಹಾಗೂ ನಾಲ್ಕನೆಯ ಆಣೆಯನ್ನು ಬಾವಿಗೆ ಎಸೆಯುವೆನು ಎಂದ ರೈತ.

ಈ ಮಾತಿನ ಗೂಡಾರ್ಥ ರಾಜನಿಗೆ ತಿಳಿಯಲಿಲ್ಲ. ಬಿಡಿಸಿ ಹೇಳಬೇಕೆಂದು ಕೇಳಿಕೊಂಡ. ಅದಕ್ಕೆ ರೈತನು ಇದೇನು ಕಠಿಣ ಮಾತು ಸ್ವಾಮಿ. ಮೊದಲನೆಯ ಆಣೆಯಿಂದ ನನ್ನ ಮತ್ತು ನನ್ನ ಹೆಂಡತಿಯ ಉದರ ಪೋಷಣೆ ಮಾಡುವೆನು. ಎರಡನೆಯದರಿಂದ ನನ್ನ ಮಕ್ಕಳನ್ನು ಸಾಕಿ ಸಲಹುವೆನು. ನಾನು ಮುದುಕನಾಗಿ ಅಶಕ್ತನಾದಾಗ ಅವರು ನನ್ನನ್ನು ಸಂರಕ್ಷಿಸಿ ಕೊಟ್ಟ ಸಾಲವನ್ನು ಹಿಂದಕ್ಕೆ ಕೊಡುವರು. ಮೂರನೆಯ ಆಣೆಯಿಂದ ನಾನು ನನ್ನ ತಂದೆಯನ್ನು ಸಾಕುತ್ತಿರುವೆನು. ಅವರು ನನ್ನನ್ನು ಮೊದಲು ಸಾಕಿ ಸಲುಹಿದ ಹಣವನ್ನು ಹಿಂದಕ್ಕೆ ಸಲ್ಲಿಸುತ್ತಿರುವೆನು. ನಾಲ್ಕನೆಯ ಆಣೆಯನ್ನು ದಾನವಾಗಿ ಕೊಡುತ್ತಿದ್ದೇನೆ. ಅದರಿಂದ ಯಾವುದೇ ಪ್ರತಿಫಲಾಪೇಕ್ಷೆ ಮಾಡುವುದಿಲ್ಲ. ಕಾರಣ ಅದನ್ನು ಬಾವಿಗೆ ಎಸೆಯುತ್ತೇನೆ ಎಂದೆ ಎಂದು ವಿವರಿಸಿದನು. ರಾಜ ಈ ಉತ್ತರದಿಂದ ಸಂತುಷ್ಟನಾದ. ನನ್ನ ಮುಖವನ್ನು ನೂರು ಸಲ ನೋಡುವವರೆಗೂ ಈ ಪ್ರಶ್ನೆಯ ಉತ್ತರವನ್ನು ಯಾರಿಗೂ ಹೇಳಕೂಡದು ಎಂದು ಕಟ್ಟಪ್ಪಣೆ ಮಾಡಿದ.

ಮರುದಿನ ರಾಜ ದರ್ಬಾರಿನಲ್ಲಿ ಇದೇ ಪ್ರಶ್ನೆಯನ್ನೊಡ್ಡಿದ.

ಈ ದೇಶದಲ್ಲಿ ರೈತನೊಬ್ಬನಿದ್ದಾನೆ, ಆತ ದಿನಕ್ಕೆ ನಾಲ್ಕಾಣೆ ಸಂಪಾದಿಸುವನು. ಮೊದಲನೆಯದರಿಂದ ಉಣ್ಣುತ್ತಾನೆ. ಎರಡನೆಯದನ್ನು ಸಾಲವಾಗಿ ಕೊಡುತ್ತಾನೆ. ಮೂರನೆಯದರಿಂದ ಸಾಲವನ್ನು ತೀರಿಸುತ್ತಾನೆ. ನಾಲ್ಕನೆಯದನ್ನು ಬಾವಿಗೆ ಎಸೆಯುತ್ತಾನೆ. ಇದು ಹೇಗೆ ಬಿಡಿಸಿ ಹೇಳಿ? ಎಂದ ರಾಜ. ಮಂತ್ರಿಗಳು ತಲೆ ಕೆರೆದುಕೊಂಡರೂ ಉತ್ತರ ತೋಚಲಿಲ್ಲ. ಮಂತ್ರಿಯೊಬ್ಬನಿಗೆ ಹಿಂದಿನ ದಿನ ರಾಜ ರೈತನೊಬ್ಬನೊಂದಿಗೆ ಮಾತನಾಡಿದುದು ಗೊತ್ತಾಯಿತು. ತಡಮಾಡದೆ ರೈತನ ಬಳಿ ಓಡಿದ. ಉತ್ತರ ಹೇಳಲು ಬೇಡಿಕೊಂಡ.

ನಾನು ರಾಜನ ಮುಖವನ್ನು ನೂರು ಸಲ ನೋಡುವವರೆಗೆ ಈ ಪ್ರಶ್ನೆಯ ಉತ್ತರವನ್ನು ಯಾರಿಗೂ ಹೇಳುವುದಿಲ್ಲವೆಂದು ವಚನ ಕೊಟ್ಟಿರುವೆ ಎಂದು ರೈತನು ತಿಳಿಸಿದನು.

ಜಾಣ ಮಂತ್ರಿಗೆ ಮಿಂಚು ಹೊಳೆದಂತಾಯಿತು. ರಾಜನ ಮುಖ ಮುದ್ರೆಯಿರುವ ನೂರು ಚಿನ್ನದ ಮೊಹರುಗಳನ್ನು ರೈತನಿಗೆ ಕೊಟ್ಟನು. ನೂರು ಬಾರಿ ರೈತ ರಾಜನ ಮುಖ ನೋಡಿದ ಮೇಲೆ ಉತ್ತರ ತಿಳಿಸಿದ.

ಉತ್ತರ ಕೇಳಿಕೊಂಡ ಮಂತ್ರಿ ಮರುದಿನ ದರ್ಬಾರಿನಲ್ಲಿ ರಾಜನೆದುರು ಅರ್ಥ ಅರುಹಿದ. ರಾಜನಿಗೆ ಆಶ್ಚರ್ಯ!

ನೀನು ರೈತನಿಂದ ಉತ್ತರ ಕೇಳಿ ಬಂದಿರುವೆ ಎಂದು ರೈತನನ್ನು ಕರೆಯಿಸಿದ ರಾಜ.

ರಾಜನು ನೀನು ನನ್ನ ವಚನವನ್ನೇಕೆ ಪಾಲಿಸಲಿಲ್ಲ? ಎಂದು ರೈತನನ್ನು ಪ್ರಶ್ನಿಸಿದ.

ಸ್ವಾಮಿ, ಮಂತ್ರಿಗಳಿಗೆ ಉತ್ತರ ಹೇಳುವ ಮೊದಲು ತಮ್ಮ ಮುಖವನ್ನು ನೂರು ಸಲ ನೋಡಿದೆ ಎಂದು ರೈತ ನುಡಿದು, ತನ್ನ ಬಳಿಯಿದ್ದ ನೂರು ಚಿನ್ನದ ಮೊಹರುಗಳನ್ನು ತೋರಿಸಿದ.

ರಾಜನು ಆತನ ಜಾಣ್ಮೆಗೆ ಮೆಚ್ಚಿ ಮತ್ತೆ ನೂರು ಚಿನ್ನದ ಮೊಹರುಗಳನ್ನು ಬಹುಮಾನವಾಗಿ ಕೊಟ್ಟು ಕಳುಹಿಸಿದ.

■ ಪ್ರಕಾಶ ಎಸ್. ಮನ್ನಂಗಿ



ಚಿತ್ರ: ಮಂಜುನಾಥ ಹುಲಕೊಪ್ಪದ